ಶ್ರೀ ಎಂ. ಎಸ್. ಕೃಷ್ಣನ್.—ಈ ವಿಚಾರಣೆಯನ್ನು ಮಾಡುವಾಗ ಅವರೂ ಒಬ್ಬರು ಎಂಎಲ್ಎ ಆಗಿದ್ದುದರಿಂದ ಅವರನ್ನು ಕರೆದು ಅವರ ಹೇಳಿಕೆಯನ್ನೇನಾದರೂ ತೆಗೆದುಕೊಂಡರೇ ಹೇಗೆ ? ಇಲ್ಲವೇ ಡಿಪಾರ್ಟ್‌ಮೆಂಟ್ ರೂಲ್ಸ್ ಪ್ರಕಾರ ಮಾತ್ರ ವಿಚಾರಣೆ ಮಾಡಲಾಯಿತೇ ?

ಶ್ರೀ ಎಸ್. ಎಂ. ಕೃಷ್ಣ.—ಇದರ ಬಗ್ಗೆ ಡಿಪಾರ್ಟ್‌ಮೆಂಟ್ ರೂಲ್ಸ್‌ನ ಪ್ರಕಾರ ವಿಚಾರ ಮಾಡಿರುವುದರಿಂದ ಮಾನ್ಯ ಸದಸ್ಯರೂ ಇದರಲ್ಲಿ ನಂಬಿಕೆ ಇಟ್ಟುಕೊಳ್ಳಬೇಕೆಂದು ಕಳಕಳಿಯಿಂದ ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ವಿಚಾರಣೆಯನ್ನು ಸರಕಾರದವರು ಮಾಡಿರುವುದರಿಂದ ಅದರ ಬಗ್ಗೆ ಮಾನ್ಯ ಸದಸ್ಯರಿಂದ ನೇರವಾಗಿ ಹೇಳಿಕೆಯನ್ನು ಏಕೆ ತೆಗೆದುಕೊಳ್ಳಲಿಲ್ಲ ?

ಶ್ರೀ ಡಿ. ದೇವರಾಜ ಅರಸ್.—ವಿಚಾರಣೆ ಮಾಡಿದಾಗ ಅವರು ಹೇಳಿರತಕ್ಕ ಆಪಾದನೆಗಳು ಯಾವುದೂ ಇಲ್ಲದುದರಿಂದ ಅವರ ಹೇಳಿಕೆ ಪಡೆಯಲಿಲ್ಲ.

ಅಧ್ಯಕ್ಷರು.—ಈಗ ಪ್ರಶ್ನೋತ್ತರ ವೇಳೆಯಾಯಿತು.

QUESTION FOR ANSWERS ON THE DAY
(BUT NOT TAKEN UP)

TRANSFER OF TEACHERS AND CLERKS WORKING IN EDUCATION DEPARTMENT AT MYSORE CITY

(256) SRI K. SIDDAIAH (Santhemarahalli).—

Will the Minister for Education be pleased to state :—

(*a*) the number of teachers and clerks who have put in a service of (i) above five years and below 10 years, (ii) above 10 years and below 15 years, and (iii) above 15 years in Education Department at Mysore City (information may be furnished categorywise) ;

(*b*) the reasons for not transferring the employees who have put in more than 10 years of service

SRI A. R. BADARINARAYANA (Minister for Education)

(*a*)	Teachers	Clerks
(i) above 5 years and below 10 years	12	3 (Collegiate Education.)
	219	20 (Deptt. of Public Instruction.)
	5	3 (Technical Education.)
	236	26

(ii) above 10 years and below 15 years.	1	nill (Collegiate Edn.)
	30	8 (Deptt. of Public Instruction).
	nil	nil (Tech. Edn).
	31	8
(iii) above 15 years	nil	nil (Collegiate Edn.)
	33	3 (Deptt. of Public instruction).
	nil	nil (Tech. Edn).
	33	3

(*b*) In Collegiate Education Department none of the teachers or clerks whose stay is more than 10 years is retained except one Lecturer in Maharani's College for Women, Mysore, as a special case, since he is a physically handicapped person.

In the Primary and Secondary Education Department the reason is due to the officials being on the verge of retirement or to avoid separation of husband and wife or on medical grounds and also due to children's education.

CALLING ATTENTION TO MATTERS OF URGENT PUBLIC IMPORTANCE

(*i*) *Re . alleged misbehaviour of the Housing Commissioner*

ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರ). ಸ್ವಾಮಿ, ವಿಧಾನ ಸಭೆಯಂ ೬೩ ನೆಯ ನಿಯಮಾವಳಿಯ ಪ್ರಕಾರ ಗೃಹಮಂಡಲಿಯ ಕಮಿಷನರವರು ದುರ್ವರ್ತನೆಯಿಂದ ವರ್ತಿಸಿದರೆಂದು ಆಪಾದಿಸಲಾದ ವಿಚಾರವನ್ನು ನಗರಾಡಳಿತ ಮಂತ್ರಿಗಳ ಗಮನಕ್ಕೆ ತರುತ್ತೇನೆ. It reads as.

"I call the attention of the Minister for Municipal Administration to a recent incident of urgent character namely, the reported ill-treatment of lady employees and other officials of the Mysore StateHousing Board by the Housing Commissioner, Mysore Housing Board, Bangalore."